# ಕಾಸ್ಟಿಂಗ್‌ಗಿಂತ ಕಥೆಯೇ ಮುಖ್ಯ: ಶರ್ಮಿಳಾ




'ಸಿನಿಮಾಗೆ ನನ್ನ ನಟನೆ ಪ್ರಮುಖವಾಗಿದೆ ಅನಿಸಿದರೆ ಆ ಪಾತ್ರ ನಿಭಾಯಿಸುತ್ತೇನೆ. ಈಗಿನ ಪ್ಯಾನ್ ಇಂಡಿಯಾ ಸಂಸ್ಕೃತಿಯಲ್ಲಿ ಸ್ಕ್ರೀನ್ ಟೈಂ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಸ್ಕ್ರೀನ್ ಟೈಂ ಎಷ್ಟೇ ಇರಲಿ, ಅತ್ಯುತ್ತಮವಾಗಿ ರೂಪಿಸಿದ ಪಾತ್ರಗಳನ್ನು ಜನರು ಎಂದಿಗೂ ಮರೆಯುವುದಿಲ್ಲ' ಎಂದಿದ್ದಾರೆ ನಟಿ ಶರ್ಮಿಳಾ ಮಾಂಡ್ರೆ.

ಪ್ರಸ್ತುತ 'ಡ್ಯಾಡ್' ಸಿನಿಮಾದಲ್ಲಿ ತೊಡಗಿಕೊಂಡಿರುವ ಶರ್ಮಿಳಾ ಮಾಂಡ್ರೆ, ಸಿನಿಮಾದಲ್ಲಿ ಶಿವಣ್ಣ ಜೊತೆ ತೆರೆಹಂಚಿಕೊಳ್ಳುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಕಥೆ, ಕಾಸ್ಟಿಂಗ್ ಹಾಗೂ ಈಗಿನ ಸಿನಿಮಾಗಳ ಅಪ್ರೋಚ್ ಕುರಿತು ಮಾತನಾಡಿದ್ದಾರೆ.

'ಡ್ಯಾಡ್' ಸಿನಿಮಾಗೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೊಂಡಿರುವ ಅವರು, 'ಇದು ಟಿಪಿಕಲ್ ಮಾಸ್ ಎಂಟರ್‌ಟೇನರ್ ಸಿನಿಮಾ ಅಲ್ಲದಿದ್ದರೂ ಥ್ರಿಲ್ಲರ್ ಜಾನರ್‌ನದ್ದಾಗಿದೆ, ಸಿನಿಮಾ ಅಪ್ರೋಚ್ ಬಹಳ ಭಿನ್ನವಾಗಿದೆ. ಸಿನಿಮಾ ಕಥೆ ಬಲಿಷ್ಠವಾಗಿದ್ದು, ಇದೇ ಈ ಸಿನಿಮಾವನ್ನು ಮುನ್ನಡೆಸಲಿದೆ. ನಟಿಯಾಗಿ ಮಾತ್ರವಲ್ಲದೆ, ನೋಡುಗಳಾಗಿಯೂ ಸಿನಿಮಾ ಹೊಸ ಉತ್ಸಾಹ ತುಂಬುವಂತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶಿವಣ್ಣ ಜೊತೆ ಅಭಿನಯಿಸುತ್ತಿರುವ ಅನುಭವದ ಕುರಿತು ಮಾತನಾಡಿ, 'ಶಿವಣ್ಣ ಜೊತೆ ಕೆಲಸ ಮಾಡುತ್ತಿರುವ ಎರಡನೇ ಸಿನಿಮಾ ಇದು. ಹೀಗಾಗಿ ಹೊಸತು ಎಂದೇನೂ ಅನ್ನಿಸುತ್ತಿಲ್ಲ. ಅವರದ್ದು ಅದ್ಭುತ ಎನರ್ಜಿ. ಸೆಟ್‌ನಲ್ಲಿ ಎಲ್ಲರೂ ಕಂಫರ್ಟೆಬಲ್ ಆಗಿರುವಂತೆ ನೋಡಿಕೊಳ್ಳುತ್ತಾರೆ' ಎಂದಿದ್ದಾರೆ.

ಕನ್ನಡ ಸಿನಿಮಾರಂಗದಲ್ಲಿ ಮಹಿಳಾ ಕೇಂದ್ರಿತ ಕಥೆಗಳು ನಿರೀಕ್ಷಿತ ಮಟ್ಟದಲ್ಲಿ ಬರುತ್ತಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುವ ಅವರು, 'ಮಹಿಳಾ ಪ್ರಧಾನ ಸಿನಿಮಾಗಳ ಭಾಗವಾಗುವುದು ನನಗೆ ಬಹಳ ಇಷ್ಟ. ಆದರೆ ಅಂತಿಮವಾಗಿ ಸ್ಕ್ರಿಪ್ಟ್ ಎಲ್ಲವೂ ಆಗಿರುತ್ತದೆ. ಬರವಣಿಗೆ ಗಟ್ಟಿಯಾಗಿದ್ದರೆ, ಜನರಿಗೂ ಬಹಳ ಬೇಗ ತಲುಪುತ್ತದೆ' ಎನ್ನುತ್ತಲೇ, 'ನನಗೆ ದೊಡ್ಡ ಮಟ್ಟದ ಕಮರ್ಷಿಯಲ್ ಸಿನಿಮಾಗಳನ್ನು ಮಾಡುವುದಕ್ಕಿಂತ ಫ್ಯಾಮಿಲಿ ಡ್ರಾಮಾ ಅಥವಾ ಹೊಸಬರನ್ನು ಇಟ್ಟುಕೊಂಡು ತಾಜಾ ವಿಷಯ ನಿರೂಪಣೆಯ ಸಿನಿಮಾ ಮಾಡುವುದು ಇಷ್ಟ' ಎಂದು ಪುನರುಚ್ಚರಿಸಿದ್ದಾರೆ. ■



# 'ಸಾದಾಸೀದಾ ಹುಡುಗ'ನ ಮಾತು

'ಏಕ್ ಲವ್ ಯಾ' ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದ ರಾಣಾ ಅಭಿನಯದ ಎರಡನೇ ಸಿನಿಮಾ ಈಚೆಗೆ ಬಿಡುಗಡೆಯಾಗಿದೆ. 'ಏಳುಮಲೆ'ಯಲ್ಲಿ ಹರೀಶನಾಗಿ ಕಾಣಿಸಿಕೊಂಡಿರುವ ಅವರು, 'ಸಾದಾಸೀದಾ ಹುಡುಗ'ನಾಗಿ ಜನರಿಗೆ ಹತ್ತಿರವಾಗುವ ನಿರೀಕ್ಷೆಯಲ್ಲಿದ್ದಾರೆ.

ಮೊದಲ ಸಿನಿಮಾ ಮಾಡಿ ಮೂರು ವರ್ಷದ ನಂತರ ಸಿನಿಮಾರಂಗಕ್ಕೆ ಮರಳಿದ್ದು, ಇದಕ್ಕಿದ್ದ ಕಾರಣಗಳ ಕುರಿತು ಮಾತನಾಡಿದ್ದಾರೆ.

'ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಮೊದಲ ಸಿನಿಮಾ ನನಗೆ ಕಿಕ್ ಸ್ಟಾರ್ಟ್ ಆಯಿತು. ನಾನು ಮಾಡುವ ಎರಡನೇ ಸಿನಿಮಾ, ಜನರು ನನ್ನೊಂದಿಗೆ ಕನೆಕ್ಟ್ ಆಗುವಂತೆ ಇರಬೇಕೆಂದು ಬಯಸಿದ್ದೆ. ಯಾವುದೇ ಕಥೆಯ ನಿರೂಪಣೆಯನ್ನು ಮೊದಲು ಪ್ರೇಕ್ಷಕನಾಗಿ ಕೇಳುತ್ತೇನೆ. ಎರಡು ಗಂಟೆಗಳ ಅವಧಿ ಬೋರ್ ಆಗದಂತೆ ಕಥೆಯನ್ನು ನಾನು ಕೇಳಲು ಸಾಧ್ಯವಾಯಿತು ಎಂದಾದರೆ ಮಾತ್ರ ಸಿನಿಮಾ ಮಾಡುತ್ತೇನೆ' ಎಂದಿದ್ದಾರೆ. ಇದೇ ಅಂಶ 'ಏಳುಮಲೆ' ಸಿನಿಮಾದಲ್ಲಿ ನಟಿಸಲು ಅವರಿಗೆ ಕಾರಣವಾಯಿತಂತೆ.

'ಕೆಲವರು ಸಿನಿಮಾಗಳ ವಿಷಯದಲ್ಲಿ ಚೂಸಿಯಾಗಬೇಡ. ಒಂದಾದ ನಂತರ ಒಂದರಂತೆ ಸಿನಿಮಾಗಳನ್ನು ಮಾಡುತ್ತಿರು ಎನ್ನುತ್ತಾರೆ. ಆದರೆ ನನಗೆ ಹಾಗೆ ಮಾಡುವುದು ಇಷ್ಟವಿಲ್ಲ. ಕಳೆದ ಮೂರು ವರ್ಷಗಳಲ್ಲಿ ಮೂರು ಸಿನಿಮಾಗಳನ್ನು ಮಾಡಬಹುದಿತ್ತು. ಆದರೆ ಸಿನಿಮಾ, ಜನರಿಗೆ ಇಷ್ಟವಾಗಲಿಲ್ಲ ಎಂದರೆ ಉಪಯೋಗವಿಲ್ಲ. ಅದಕ್ಕಿಂತ ಉತ್ತಮ ಕಥೆಗೆ ಕಾಯುವುದೇ ಬಹಳ ಒಳ್ಳೆಯದು' ಎಂದಿದ್ದಾರೆ.

2022ರಲ್ಲಿ 'ಏಕ್ ಲವ್ ಯಾ' ಸಿನಿಮಾ ಮೂಲಕ ರಾಣಾ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದರು. ಅದನ್ನು ಪ್ರೇಮ್ ನಿರ್ದೇಶನ ಮಾಡಿದ್ದರು. ಆ ಸಿನಿಮಾದ ಹಾಡುಗಳು ಹಿಟ್ ಆದವು. ಅದಾದ ಮೂರು ವರ್ಷಗಳ ನಂತರ ಮತ್ತೆ ಸಿನಿಮಾಗಳತ್ತ ಮುಖ ಮಾಡಿದ್ದಾರೆ. ■